ಶ್ರೀ ಆರ್. ಗುಂಡೂರಾವ್.—ಅವರು ಪೇಪರಿನಲ್ಲಿ ಬಂದಿದ್ದನ್ನು ಹೇಳಿದ್ದಾರೆ ಅಷ್ಟೆ. ಸೀರೆ ಬಿಚ್ಚಿ ಹೊಡೆದಿದ್ದಾರೆಂದು ಬರೆದ ಮಾತ್ರಕ್ಕೆ ಅದು ನಿಜವಲ್ಲ. ಅದು ಸತ್ಯಕ್ಕೆ ದೂರವಾದುದು.

ಶ್ರೀ ಪಂಪಾಪತಿ.—ಪೋಲೀಸರು ಮಾಡಿರುವುದನ್ನು ನಿಜವಲ್ಲವೆಂದು ತಾವು ಹೇಳುವುದಾದರೆ, ನಾವು ಏನು ಮಾಡಬೇಕು. ನಾವಾದರೂ ಸುಳ್ಳನ್ನು ಏತಕ್ಕೆ ಹೇಳಬೇಕು. ಪೋಲೀಸರ ಮೇಲೆ ನಮಗೆ ಏನಾದರೂ ವಿರೋಧ ಇದೆಯೇ?

ಶ್ರೀ ಆರ್. ಗುಂಡೂರಾವ್.—ಅವರಿಗೆ ನಿಮ್ಮ ಮೇಲೆ ವಿರೋಧವಿಲ್ಲ, ನಿಮಗೆ ಅವರ ಮೇಲೆ ವಿರೋಧವಿಲ್ಲ, ಅಂತೂ ಅಲ್ಲಿ ಘಟನೆ ನಡೆದಿದೆ.

REPRESENTATIONS

SRI C.M. ARUMUGHAM.—Sir, I had sent a Calling Attention notice regarding the non-disbursement of scholarship to the students of Scheduled Caste/Scheduled Tribe studying in the city of Bangalore.

MR. SPEAKER.—We are having it tomorrow.

SRI C.M. ARUMUGHAM.—You are admitting it tomorrow. But it is an important question pertaining to thousands of students studying in Bangalore.

MR. SPEAKER;—It is on the agenda tomorrow.

SRI C.M. ARUMUGHAM: —I will raise it today only.

MR. SPEAKER:—I have already stated that I have put it on the agenda of tomorrow.

SRI SHEERNALY M. CHANDRASHEKAR;—Sir, I had sent a Calling Attention notice regarding Special Group. The Heads of the institutions are mis-interpreting. It is very important, It may be taken up immediately.

ಅಧ್ಯಕ್ಷರು.—ತಾವು ಯಾವಾಗ ಕಳುಹಿಸಿದ್ದೀರಿ?

ಶ್ರೀ ಎಸ್.ಎಂ. ಶೀರ್ನಾಳಿ ಚಂದ್ರಶೇಖರ್.—ನಿನ್ನೆ ಕಳುಹಿಸಿದ್ದೇನೆ. ನಿನ್ನೆ ಕಾಲೇಜುಗಳು, ಸ್ಕೂಲುಗಳು ಪ್ರಾರಂಭವಾಗುತ್ತಿವೆ. ಆದ್ದರಿಂದ ಆದಷ್ಟು ಬೇಗ ಅದನ್ನು ತೆಗೆದುಕೊಳ್ಳಬೇಕು. ಏಕೆಂದರೆ ಅಲ್ಲಿ ಮಕ್ಕಳಿಗೆ ಬಹಳ ತೊಂದರೆಯಾಗುತ್ತಿದೆ.

ಶ್ರೀ ಹೆಚ್. ಗಂಗಾಧರಸ್ವಾಮಿ.—ಜಾವಾ ಫ್ಯಾಕ್ಟರಿ ಲಾಕೌಟ್ ಮಾಡಿ ಸುಮಾರು ೩ ಸಾವಿರ ಜನರನ್ನು ಹೊರಗೆ ಹಾಕಿದ ಬಗ್ಗೆ ನೋಟೀಸ್ ಕೊಟ್ಟಿದ್ದೇನೆ. ಅವರಿಗೆ ಬಹಳ ತೊಂದರೆಯಾಗುತ್ತಿದೆ.

ಅಧ್ಯಕ್ಷರು.—ಯಾವಾಗ ಕಳುಹಿಸಿದ್ದೀರಿ?

ಶ್ರೀ ಹೆಚ್. ಗಂಗಾಧರನ್.—ಮೊನ್ನೆ ದಿವಸ ಕಳುಹಿಸಿದ್ದೇನೆ.

ಶ್ರೀ ಹೆಚ್.ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ಕಾಗೋಡು ತಿಮ್ಮಪ್ಪನವರು ಜೂನ್ ೧೨ರಂದು ೨೩ನೇ ಪಟ್ಟಿಯ ನನ್ನ ಚು.ಪ್ರ. ೨೭೭ಕ್ಕೆ ಸಂಬಂಧಪಟ್ಟಂತೆ ಉತ್ತರ ಕೊಡುವಾಗ ಕೆಲವು ವಿವರಗಳನ್ನು ಸಭೆಗೆ ಒದಗಿಸುತ್ತೇನೆಂದು ಹೇಳಿದ್ದರು. ಆಪರ ಇಲಾಖೆಯ ಬೇಡಿಕೆಗಳು ಚರ್ಚೆಗೆ ಬರುವುದಕ್ಕಿಂತ ಮುಂಚಿತವಾಗಿ ಯಾವಾಗ ಒದಗಿಸುತ್ತಾರೆಂಬುದನ್ನು ಅವರು ತಿಳಿಸಬೇಕು.

ಅಧ್ಯಕ್ಷರು.—ಮಾನ್ಯ ತಿಮ್ಮಪ್ಪನವರೇ, ತಮ್ಮ ಡಿಮ್ಯಾಂಡ್ ಚರ್ಚೆಗೆ ಬರುವುದಕ್ಕೆ ಮುಂಚಿತವಾಗಿ ಮಾನ್ಯ ಸದಸ್ಯರಿಗೆ ಚರ್ಚೆಗೆ ಅನುಕೂಲವಾಗುವಂಥ ಕೆಲವು ವಿವರಗಳನ್ನು ಕೊಡುತ್ತೇವೆಂದು ಹೇಳಿದ್ದಿರಂತೆ, ಏನಾದರೂ ಇದರ ಬಗ್ಗೆ ಹೇಳುತ್ತೀರಾ?

ಶ್ರೀ ಕಾಗೋಡು ತಿಮ್ಮಪ್ಪ.—ನಾನು ಅದನ್ನೆಲ್ಲಾ ಅವತ್ತೇ ಹೇಳಿದ್ದೇನೆ. ನಾನು ಹೇಳಿರುವುದು ಅವರಿಗೇ ಜ್ಞಾಪಕವಿಲ್ಲ.

ಶ್ರೀ ಹೆಚ್.ಡಿ. ದೇವೇಗೌಡ. - ನಮ್ಮ ರಾಜ್ಯಕ್ಕೆ ಸಂಬಂಧಪಟ್ಟಂತೆ, ಮಿಸ್‌ಯೂಸ್ ಆಫ್ ಸ್ಟೀಲ್ ಆಂಡ್ ಸಿಮೆಂಟ್ ಬಗ್ಗೆ ಕೆಲವು ಪ್ರಶ್ನೆಗಳನ್ನು ಕಳುಹಿಸಿದ್ದೆ. ನಾನು ಪ್ರಶ್ನೆಯನ್ನು ಕಳುಹಿಸಿ ಸುಮಾರು ೨೫ ದಿವಸಗಳಾಯಿತು. ಇದಕ್ಕೆಲ್ಲಾ ನಮ್ಮ ವಿಧಾನಸೌಧದಲ್ಲಿಯೇ ಉತ್ತರ ಸಿಕ್ಕುವಂಥವು.....

ಅಧ್ಯಕ್ಷರು.—ನಾನು ಅದನ್ನು ತರಿಸಿ ನೋಡುತ್ತೇನೆ.

reg.—Observation from the Chair
re:—Publication of news item in a Kannada Daily

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ನಿನ್ನೆಯ ದಿವಸ ಗೋಕಾಕ್ ವರದಿಯ ಬಗ್ಗೆ ಸರ್ಕಾರದವರು ತಮ್ಮ ನಿಲುವನ್ನು ತಿಳಿಸುತ್ತಾರೆಂದು ಈ ಸಭೆಗೆ ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರೂ, ಪತ್ರಿಕಾಕರ್ತರೂ ಬಂದಿದ್ದರು...

ಅಧ್ಯಕ್ಷರು.—I Would like to clarify. ತಾವು ದಯವಿಟ್ಟು ಕೂತುಕೊಳ್ಳಿ. ''ಪತ್ರಕರ್ತರು ಹೊಗಕ್ಕೆ'' ಎಂದು ಒಂದು ದೊಡ್ಡ ಶಿರೋನಾಮೆಯಲ್ಲಿ ಕನ್ನಡ ಪ್ರಭದಲ್ಲಿ ವರದಿಯಾಗಿದೆ. ಅದರಲ್ಲಿ ಒಂದು ಮಾತನ್ನು ಹೇಳಿದೆ. ವಿಧಾನ ಸಭೆಯಲ್ಲಿ ಸ್ಪೀಕರ್‌ರವರ್ದ್ದೇ ಅಂತಿಮ ಅಧಿಕಾರ—ಅವರ ಮಾತಿಗೆ ಎದುರೇ ಇಲ್ಲ, ಎಂದು ವರದಿಯಾಗಿದೆ. ನಾನು ಸಭೆಯ ಗಮನಕ್ಕೆ ತರುತ್ತಿದ್ದೇನೆ. ಪತ್ರಿಕಾ ಕರ್ತರನ್ನು ಅಲ್ಲಿಗೆ ಬಿಡಕೂಡದೆಂದು ನಾನು ಯಾರಿಗೂ ಹೇಳಿಲ್ಲ. ಪತ್ರಕರ್ತರನ್ನು ಬಿಡುವುದಕ್ಕೆ ಒಂದು ಕ್ರಮ ಇದೆ. ನಮ್ಮ ಸೆಕ್ರೆಟರಿಯವರು ಮತ್ತು ಪತ್ರಕರ್ತರ ಪ್ರತಿನಿಧಿಗಳೂ ಸೇರಿ ಮಾತನಾಡಿಕೊಂಡು ಯಾರು ಯಾರಿಗೆ ಪಾಸ್ ಕೊಡಬೇಕೆಂಬ ಬಗ್ಗೆ ಒಂದು ಕ್ರಮವನ್ನು ಅನುಸರಿಸುತ್ತಾರೆ. ಅದರ ಪ್ರಕಾರವೇ ನಾವೂ ಅವರಿಗೆ ಪಾಸ್ ಕೊಟ್ಟಿರುತ್ತೇವೆ. ಯಾರಾದರೂ ಅಧಿಕಾರಿ ಹೇಳಿದ್ದರೆ ಅದನ್ನು ನನ್ನ ಮುಂದೆ ಹೇಳಬಹುದಿತ್ತು. ಆದರೆ ನಾನೇ ಇದನ್ನು ಹೇಳಿದ್ದೇನೋ ಎನ್ನುವ ರೀತಿಯಲ್ಲಿ ಪತ್ರಕರ್ತರನ್ನು ಒಳಗೆ ಬಿಡಲೇ ಕೂಡದು ಎಂದು ನಾನು ಆಜ್ಞೆ ಮಾಡಿದ ರೀತಿಯಲ್ಲಿ ಮತ್ತು ಅದರಲ್ಲಿ ಅವರದ್ದೆ ಅಂತಿಮ ಅಧಿಕಾರ ಅವರ ಮಾತಿಗೆ ಎದುರೇ ಇಲ್ಲ ಎನ್ನುವ ರೀತಿಯಲ್ಲಿ ಬರೆಯತಕ್ಕಂಥದು ಅಷ್ಟು ಸರಿಯಾದುದಲ್ಲ. ಅವರು ಈ ರೀತಿ ಬರೆಯುವುದಕ್ಕೆ ಮುಂಚಿತವಾಗಿ ನನ್ನನ್ನು ಒಂದು ಮಾತು ಕೇಳಿ ಬರೆದಿದ್ದರೆ ಚೆನ್ನಾಗಿರುತ್ತಿತ್ತು. ''ಇಂಡಿಯನ್ ಎಕ್ಸ್‌ಪ್ರೆಸ್''ನಲ್ಲೂ ಕೂಡ ''ರಿಪೋರ್ಟರ್ಸ್ ಎಕ್ಸ್‌ಪೆಲ್ಡ್'' ಅಂತ ಒಂದು ಹೆಡ್ಡಿಂಗ್ ಕೊಟ್ಟು ಬರೆದಿದ್ದಾರೆ. ತಮಗೆಲ್ಲಾ ಗೊತ್ತೇ ಇದೆ. ಸಾಮಾನ್ಯವಾಗಿ ರಾಜ್ಯಪಾಲರ ಭಾಷಣವಾಗುವಾಗ, ಬಜೆಟ್ ಮಂಡಿಸುವಾಗ, ಅಥವಾ ಏನಾದರೂ ವಿಶೇಷವಾದಂಥ ವಿಚಾರಗಳೇನಾದರೂ ಇಲ್ಲಿ ಪ್ರಸ್ತಾಪವಾಗುವಾಗ ಗ್ಯಾಲರಿಗೂ ಜನರು ಬರುತ್ತಾರೆ, ಪತ್ರಕರ್ತರ ಸಂಖ್ಯೆಯೂ ಜಾಸ್ತಿ ಇರುತ್ತದೆ. ವಿ ಐ ಪಿ. ಗಳು ಬರುತ್ತಾರೆ. ಇಲ್ಲಿ ಆಸನಗಳ ಕೊರತೆ ಇರುವುದರಿಂದ ಅನೇಕರು ನಿಂತುಕೊಂಡಿದ್ದುದನ್ನು ನಾನು ನೋಡಿದ್ದೇನೆ. ಅಂಥ ದಿವಸದಲ್ಲಿ ನಾವು ಯಾವುದೇ ಅಡ್ಡಿಯನ್ನೂ ಮಾಡುವುದಿಲ್ಲ. ಆದರೆ ಕಾರಣಾಂತರದಿಂದ ನಿನ್ನೆ ಈ ಪ್ರಕರಣ ಜರುಗಿದೆ, ಮಾರ್ಷಲ್ ಈ ರೀತಿ ಹೇಳಿದರು ಅಂತ ವಿವರಣೆ ಕೊಟ್ಟಿದ್ದಾರೆ, ಆದರೆ ನೇರವಾಗಿ ನಾನೇ ಇದನ್ನು ಹೇಳಿದೆ. ಇದು ಅವರಿಗೆ ಗೊತ್ತಾಯಿತು ಎನ್ನುವ ರೀತಿಯಲ್ಲಿ ಬರೆಯುವುದು ಅಷ್ಟು ಸರಿಯಲ್ಲ. ಮತ್ತೆ ಪ್ರಜಾವಾಣಿ ಪತ್ರಿಕೆಯಲ್ಲೂ ಕೂಡ ತಾವು ಗಮನಿಸಬೇಕು. ನಾನು ಈಗಾಗಲೇ ಪ್ರಸ್ತಾಪ ಮಾಡಿದ್ದೇನೆ. ಸಂಪಾದಕೀಯ ಕಾಲಂನಲ್ಲಿ ಬರೆಯಲು ಅವರಿಗೆ ಪೂರ್ಣ ಹಕ್ಕು ಇರುತ್ತದೆ. ಬೇರೆ ಕಾಲಂನಲ್ಲಿ ಈ ಸಭೆಯಲ್ಲಿ ಏನು ನಡೆಯುತ್ತದೆ ಅದನ್ನು ಸರಿಯಾಗಿ ಫೇಸಿಂಗ್ ರಿಪೋರ್ಟ್ ಹಾಕತಕ್ಕಂಥದ್ದು ಅವಶ್ಯಕ ಇದನ್ನು ಸದನದ ಸಮಿಾಕ್ಷೆ ಎಂದು ಒಂದು ಬರುತ್ತದೆ ಅದು ಅವರದ್ದೇ ಆದ ರೀತಿಯಲ್ಲಿ ಬರುತ್ತದೆ. ಇಲ್ಲಿ ''ಮೇಲ್ಮನೆಯದೇ'' ಮೇಲುಗೈ ಎಂದರೆ ಏನು ಅರ್ಥ ಮತ್ತೆ ಎಲ್ಲ ವಿಚಾರಗಳಲ್ಲೂ ರಾಜ್ಯ ವಿಧಾನ ಮಂಡಲದ ''ಮೇಲ್ಮನೆಯದೇ ಮೇಲುಗೈ'' ಸರಕಾರ ತರುವ ಶಾಸನ, ಸೂತ್ರ, ನಿರ್ಣಯ, ವಿಷಯ ನಿರೂಪಣೆ, ವರದಿ—ಏನೇ ಆಗಲಿ ಅದರಲ್ಲಿರುವ ಹಂಳುಕನ್ನು ಎತ್ತಿ ತೋರಿಸುವುದರಲ್ಲಿ ಮೇಲ್ಮನೆಯಲ್ಲಿರುವ ''ವಿರೋಧ ಪಕ್ಷಗಳವರದು ಎತ್ತಿದ ಕೈ'' ಹಾಗೆಂದರೆ ಏನು ಅರ್ಥ. ಈ ಸದನದ ಸದಸ್ಯರು ನಿರ್ವಿರ್ಯರಾಗಿ ಕುಳಿತುಕೊಂಡು ೫೦ ರೂಪಾಯಿ